Date : 11-9-2015



## ಆಂಧ್ರದ ಬೇಳೆಕಾಳು ಬಿತ್ತನೆ ಏರಿಯಾ 2.26 ಲಕ್ಷ ಹೆಕ್ಟೇರ್‌ಗಳು

ಸೆಪ್ಟೆಂಬರ್ 9, 2015ರ ತನಕ ಆಂಧ್ರಪ್ರದೇಶದಲ್ಲಿ 2.26 ಲಕ್ಷ ಹೆಕ್ಟೇರ್‌ಗಳಲ್ಲಿ ಬೇಳೆಕಾಳು ಬಿತ್ತನೆಯಾಗಿದೆ. ಇದು ಹಿಂದಿನ ವರ್ಷ ಈ ಸಮಯದಲಲಿ ಬಿತ್ತನೆಯಾದ 1.53 ಲಕ್ಷ ಹೆಕ್ಟೇರ್‌ಗಿಂತ 48 ಶೇಕಡಾ ಅಧಿಕವಾಗಿದೆ. ಇತರ ಹೆಸರುಕಾಳು ಮತ್ತು ಕೆಂಪು ಬೇಳೆಯ ಬಿತ್ತನೆ ಗಣನೀಯ ಹೆಚ್ಚಳ ಕಂಡಿದೆಯೆನ್ನಲಾಗಿದೆ.

## ಆಸ್ಟ್ರೇಲಿಯಾದಲ್ಲಿ ಕಡ್ಲೆ ಬಂಪರ್ ಕಟಾವು

ಆಸ್ಟ್ರೇಲಿಯಾದಲ್ಲಿ ಈ ಬಾರಿ ಕಡ್ಲೆ ಬಂಪರ್ ಕಟಾವಾಗಿ ಹಿಂದಿನ ವರ್ಷದ ಇಮ್ಮಡಿ ಉತ್ಪಾದನೆಯಾಗ ಬಹುದೆನ್ನಲಾಗಿದೆ. ಪೆಂಟಾಗ್ ಅಂದಾಜಿಸಿದಂತೆ ಕ್ವೀನ್ಸ್‌ಲ್ಯಾಂಡಿನ ಕಡ್ಲೆ ಉತ್ಪಾದನೆ 90000 ದಿಂದ 1 ಮಿಲಿಯನ್ ಟನ್‌ಗಳಾಗ ಬಹುದು. ಪಲ್ಸ್ ಆಸ್ಟ್ರೇಲಿಯಾ ಪ್ರಕಾರ 94000 ಟನ್‌ಗಳು ಮತ್ತು ಆಸ್ಟ್ರೇಲಿಯನ್ ಸರಕಾರಿ ಏಜೆನ್ಸಿ ಎಬೇರ್ಸ್ ಪ್ರಕಾರ 99000 ಟನ್ ಉತ್ಪಾದನೆಯಾಗಲಿದೆ.

## ಸರ್ವಕಾಲಿಕ ದಾಖಲೆ ದರದಿಂದ ಭಾರತೀಯ ಕಡ್ಲೆ ದರ ಇಳಿಕೆ

ಮಳೆಯ ಕೊರತೆಯಿಂದ ಭಾರತದಲ್ಲಿ ಮುಂದಿನ ಬೆಳೆಯ ಕಡ್ಲೆ ಉತ್ಪಾದನೆ ಕುಂಠಿತವಾಗುವ ಭೀತಿಯಿಂದ ದೇಶೀ ಕಡ್ಲೆ ದರ ನಿರಂತರ ಹೆಚ್ಚಳವಾಗಿ ಸರ್ವಕಾಲಿಕ ದರ ಹೆಚ್ಚಳ ದಾಖಲಿಸಿತ್ತು. ಹಿಂದಿನ ಬೆಳೆಯ ಉತ್ಪಾದನೆ ಕಡಿಮೆಯಾಗಿತ್ತು ಮತ್ತು ಬಿತ್ತನೆ ಕಡಿಮೆಯಾಗಿ ಅತೀವೃಷ್ಟಿಯಿಂದಾಗಿ ಬೆಳೆ ಹಾನಿಯಾಗಿತ್ತು. ಇದರಿಂದ ಈಗ ದರ ಸರ್ವಕಾಲಿಕ ಹೆಚ್ಚಳ ದಾಖಲಿಸಿತ್ತು. ಈಗ ಮತ್ತೆ ಮನ್ಸೂನ್‌ನ ಮಳೆ ಪ್ರಗತಿಯಾಗುತ್ತಿರುವುದರಿಂದ ಮತ್ತು ಮುಂಬರುವ ಚುನಾವಣೆಗಳಿಗಾಗಿ ಸರಕಾರ ದರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ನಿರೀಕ್ಷೆಯಿಂದ ಕಡ್ಲೆ ಫ್ಯೂಚರ್ ಟ್ರೇಡಿಂಗ್‌ನ ದರಗಳು ತೀಕ್ಷ್ಣವಾಗಿ 11 ಶೇಕಡಾದಷ್ಟು ಇಳಿಕೆ ದಾಖಲಿಸಿದೆ. ಹವಾಮಾನ ಮುನ್ಸೂಚನೆಯ ಪ್ರಕಾರ ಈಗ ಕೇಂದ್ರ ಮತ್ತು ದಕ್ಷಿಣ ಭಾರತದಲ್ಲಿ ಮನ್ಸೂನ್ ಮಳೆಯ ಪ್ರಗತಿಯಾಗುತ್ತಿದ್ದು, ಉತ್ತರ ಭಾರತದಲ್ಲೂ ಪ್ರಗತಿಯಾಗುವ ಸೂಚನೆಯಿದ್ದು, ಕಡ್ಲೆ ಬೆಳೆ ಸಮತೋಲನ ಹೊಂದಬಹುದೆನ್ನಲಾಗಿದೆ. ಆದರೂ ಭಾರತದಲ್ಲಿ ಕಡ್ಲೆಯ ಪೂರೈಕೆ ಕಡಿಮೆ ಇರುವ ಸಮಸ್ಯೆಯನ್ನು ಎದುರಿಸುತ್ತಿರುವುದರಿಂದ, ಮುಂಬರುವ ಚುನಾವಣೆಯ ಸಮಯದಲ್ಲಿ ದರ ನಿಯಂತ್ರಣದಲ್ಲಿರುವ ರಾಜಕೀಯ ಕಾರಣಗಳಿಂದಾಗಿ, ಆಂತರಿಕ ಬೇಡಿಕೆ ಪೂರೈಸಲು ಆಸ್ಟ್ರೇಲಿಯಾದಿಂದ ಕಡ್ಲೆ ಆಮದು ಮಾಡುವ ಸಂಭವವಿದೆಯೆನ್ನಲಾಗಿದೆ. ಹಿಂದಿನ ಬೆಳೆಯ ದಾಸ್ತಾನು ಅಲ್ಪ ಪ್ರಮಾಣದಲ್ಲಿರುವುದರಿಂದ ಹೆಚ್ಚಳವಾಗುತ್ತಿದೆ. ಈಗಾಗಲೇ ಚತ್ತೀಸ್‌ಘಡ್‌ನಲ್ಲಿ ದಾಸ್ತಾನು ಮಿತಿ ಹೇರಲಾಗಿದೆ. ಕೆಲವು ವ್ಯಾಪಾರಿಗಳ ಪ್ರಕಾರ, ಕೆಲವು ರಾಜ್ಯಗಳಲ್ಲಿ ಚುನಾವಣೆ ಸಮೀಪಿಸುತ್ತಿರುವುದರಿಂದ ಆಹಾರ ಧಾನ್ಯಗಳ ದರ ಹೆಚ್ಚಳ ತಡೆಯಲು ಸರಕಾರ ದಾಸ್ತಾನು ಮಿತಿ ಹೇರಿಕೆ, ದರದಾಸ್ತಾನು ಮಿತಿ ಮತ್ತು ಹೊಂದಿರುವ ದಾಸ್ತಾನು ಮಾರುಕಟ್ಟೆಗೆ ಹರಿಸುವ ಬಲವಂತದ ಕ್ರಮಗಳನ್ನು ಕೈಗೊಳ್ಳ ಬಹುದೆಂಬ ನಿರೀಕ್ಷೆಯಿಂದ ಸ್ಥಳೀಯ ದರ ತೀವ್ರ ಇಳಿಕೆ ಕಾಣುತ್ತಿದೆ. ಭಾರತ ಅತೀ ಹೆಚ್ಚು ಜಾಗತಿಕ ಕಡ್ಲೆ ಉತ್ಪಾದಿಸುವ ಹಾಗೂ ಅತೀ ಹೆಚ್ಚು ಕಡ್ಲೆ ಬಳಕೆದಾರ ದೇಶವಾಗಿದ್ದು, ಕಡ್ಲೆ ಬೆಳೆ ಪ್ರಮುಖವಾಗಿ ಮುಂಗಾರು ಮಳೆಯಿಂದ ಉಂಟಾಗುವ ಮಣ್ಣಿನ ತೇವಾಂಶವನ್ನು ಅವಲಂಬಿಸಿದೆ. ಫೆಸಿಫಿಕ್‌ನಾದ್ಯಂತ ಈ ವರ್ಷ ಎಲ್–ನೀನೋ ಹವಾಮಾನ ಪ್ರಭಾವದಿಂದ ಮುಂಗಾರು ಮಳೆಯ ಕೊರತೆ ಕಾಡುತ್ತಿದೆ. ಕಡ್ಲೆ ಬೆಳೆಯುವ ಪ್ರದೇಶಗಳಲ್ಲಿ ಇತ್ತೀಚೆಗೆ ಸಾಕಷ್ಟು ಮಳೆಯಾಗಿರುವುದರಿಂದ ಭಾರತೀಯ ಆಂತರಿಕ ಕಡ್ಲೆ ಹೊಸಬೆಳೆಯ ನಿರೀಕ್ಷೆಯಲ್ಲಿ ಪ್ರಗತಿಯಾಗಿದೆ. ಚತ್ತೀಸ್‌ಘಡ್‌ನ ದಾಸ್ತಾನುಮಿತಿ ಹೇರಿಕೆ, ಆಮದು ಹೆಚ್ಚಳ, ಕಡ್ಲೆ ದರ ಹೆಚ್ಚಳವಾಗದಂತೆ ಒತ್ತಡ ಹೇರುತ್ತಿದೆ.